**ಸಾಕ್ಷಿಯನ್ನು ದಿಃ *12/04/2022* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ 9(ಎ) ಪರ ವಕೀಲರಿಂದ.**

ದಾವಾ ಬಿ ಶೆಡ್ಯೂಲ್ ಅನುಕ್ರಮ 11 ನೇ ಆಸ್ತಿಯನ್ನು ಮಾಧವರಾವ ರೇಗೆ ಇವರು ಲಿಲಾವಿನಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿ. ನಂತರ ಅವರ ಹಿರಿಯ ಮಗನ ಹೆಸರಿನಲ್ಲಿ ಆಸ್ತಿ ವರ್ಗಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ಹಾಗೇಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅನುಕ್ರಮ 2 ರಿಂದ 11 ನೇ ಆಸ್ತಿ ಮಾಧವರಾವರವರ ಸ್ವಯಾರ್ಜಿತ ಆಸ್ತಿ ಇರುತ್ತವೆ ಎಂದರೆ ಸರಿಯಲ್ಲ. ದಾವಾ ಅನುಕ್ರಮ 1, 2 ಮತ್ತು 12 ಆಸ್ತಿಗಳನ್ನು ಮಾಧವರಾವ ತೀರಿಕೊಂಡ ನಂತರ ಅವರ ಹಣದಿಂದಲೇ ಖರೀದಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. 1947 ರಲ್ಲಿ ಮಾಧವರಾವ ತೀರಿಕೊಂಡ ನಂತರ ಅವರ ಮಕ್ಕಳು ಚಿಕ್ಕವರು ಇದ್ದ ಕಾರಣ ಅವರ ಆಸ್ತಿಗಳನ್ನು ನೋಡಿಕೊಳ್ಳಲು ನನ್ನ ತಂದೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಆಸ್ತಿಗಳನ್ನು ದೇಖರೇಕಿ ಮಾಡುತ್ತಾ ನಮ್ಮ ತಂದೆ ತಮ್ಮ ಹೆಸರು ಹಚ್ಚಿಕೊಂಡರು ಆನಂತರ ನನ್ನ ಹೆಸರು ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಮಾಧವರಾರವರ ಸ್ವಂತ ಆದಾಯದಿಂದ ಖರೀದಿ ಮಾಡಿರುವ ಕಾರಣ ಅವುಗಳಲ್ಲಿ ಅವರ ವಾರಸುದಾರರಿಗೆ ಮಾತ್ರ ಹಕ್ಕು ಇರುತ್ತದೆ ಬೇರೆಯವರಿಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇರದೇಯಿದ್ದರೂ 1973 ರಲ್ಲಿ ನನ್ನ ತಂದೆ ನನ್ನ ಹೆಸರು ಸೇರಿಸಿದ್ದನ್ನು ದುರುಪಯೋಗಪಡಿಸಿಕೊಂಡು ಸದರಿ ಆಸ್ತಿಗಳಲ್ಲಿ ನನಗೂ ಹಕ್ಕು ಇದೆ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹೂಡಿದಾಗ ಸದರಿ ಆಸ್ತಿಗಳಿಗೆ ಸಂಬಂಧಿಸಿ ನಾನು ಹಿಂದೆ ಏನೆನೂ ಮಾಡಿದ್ದೇನೆ ಎಂದು ಮಾಧವರಾವ ಮಕ್ಕಳಿಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಮಾಧವರಾವ ಮಕ್ಕಳಿಗೆ ಅವರ ತಂದೆ ತೀರಿಕೊಂಡಾಗ ಚಿಕ್ಕವರಿದ್ದು ಮತ್ತು ಆಸ್ತಿಗಳನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದ ಕಾರಣ ಅವರು ಯಾವತ್ತು ದಾಖಲೆಗಳನ್ನು ನೋಡುವ ಪ್ರಸಂಗ ಬಂದಿರುವುದಿಲ್ಲ ಎಂದರೆ ಸರಿಯಲ್ಲ. 1973 ರಲ್ಲಿ ನನ್ನ ತಂದೆ ತಮ್ಮ ಹೆಸರು ಹಚ್ಚಿಕೊಂಡ ನಂತರ ದಾಖಲೆಗಳನ್ನು 13 ನೇ ಪ್ರತಿವಾದಿಗೆ ಕೊಟ್ಟರು ಎಂದರೆ ಸರಿಯಲ್ಲ. 2006 ರಲ್ಲಿ ನಾನು ಈ ದಾವೆ ಹೂಡಿದ ನಂತರ ಪ್ರತಿವಾದಿಗಳು ಎಲ್ಲ ದಾಖಲೆಗಳನ್ನು ತೆಗೆಸಿ ನೋಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಬಿ ಶೆಡ್ಯೂಲ 1 ರಿಂದ 12 ಆಸ್ತಿಗಳಲ್ಲಿ ಹಾಗೂ ಸಿ ಶೆಡ್ಯೂಲ್‌ನ ಅನುಕ್ರಮ 4 ನೇ ಆಸ್ತಿಗಳಲ್ಲಿ ವಾದಿಗಳಿಗೆ, ಪ್ರತಿವಾದಿ 13,

14 ಮತ್ತು 18 ರವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 1949, 1973 ಹಾಗೂ 2006 ಇಸ್ವಿಯಿಂದ ನಮ್ಮ ತಂದೆ ಮತ್ತು ವಾಸುದೇವ ರೇಗೆ ಇವರು ಪ್ರತಿವಾದಿಗಳಿಗೆ ಸದರಿ ಆಸ್ತಿಗೆ ಸಂಬಂಧಿಸಿ ಲೆಕ್ಕ ಕೊಡಲು ಬಾದ್ಯಸ್ಥರು ಇರುತ್ತಾರೆ ಎಂದರೆ ಸರಿಯಲ್ಲ. ಎಲ್ಲ ಆಸ್ತಿಗಳಲ್ಲಿ ಮಾಧವರಾವ ಇವರ ವಂಶಸ್ಥರು ಮಾತ್ರ ಹಕ್ಕುಯುಳ್ಳವರು ಆಗಿದ್ದು, ಬೇರೆಯವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲ ವಾಸ್ತವಿಕ ಸಂಗತಿಗಳ ಬಗ್ಗೆ ನನಗೆ ಗೊತ್ತಿದ್ದರೂ ಕೂಡಾ ನಿ.ಪಿ.2 ರಿಂದ 12 ರಲ್ಲಿ ನನ್ನ ಹೆಸರು ಬಂದದನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ಸಾರ್ವಜನಿಕ ನೋಟೀಸನ್ನು ಮಾಧವರಾವ ವಂಶಸ್ಥರ ಗೌರವಕ್ಕೆ ಧಕ್ಕೆ ತರುವ ಉದ್ದೇಶದಿಂದ ಪ್ರಕಟಣೆ ಹೊರಡಿಸಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಪಾಟೀ ಸವಾಲು : ಪ್ರತಿವಾದಿ 5, 20 ಮತ್ತು 21 ರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.***

***ಪಾಟೀ ಸವಾಲು : ಪ್ರತಿವಾದಿ 2, 11, 12 ಮತ್ತು 19, 23 ರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.***

***ಪಾಟೀ ಸವಾಲು : ಪ್ರತಿವಾದಿ 3, 4, 10 ರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.***

***ಪಾಟೀ ಸವಾಲು : ಪ್ರತಿವಾದಿ 6 ರಿಂದ 8 ರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.***

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.